ಆಸಕ್ತಿ ಕಳೆದುಕೊಂಡಿದ್ದ. ರೇವತಿ ಮಾತ್ರ ಅವನ ಮನಸ್ಸಿನ ತುಂಬ ಆವರಿಸಿದ್ದಳು. ಆಕೆ ತವರುಮನೆಗೆ ಬಂದಾಗ ಈತ ಅಲ್ಲಿಗೆ ಹೋಗಿ ಭೆಟ್ಟಿಯಾಗುತ್ತಿದ್ದ. ಆಕೆಯ ಮನೆಯಲ್ಲಿ ಈತನಿಗೆ ವಿರೋಧವಿರಲಿಲ್ಲ. ರೇವತಿಯೊಂದಿಗೆ ಮೊದಲಿನಂತೆ ಎರಡೆರಡು ಗಂಟೆ ಹರಟೆ ಹೊಡೆಯುತ್ತಿದ್ದ. ಹರಟೆಗೆ ನಿಶ್ಚಿತವಾದ ವಿಷಯಗಳಿರಲಿಲ್ಲ. ಹಾಗೂ ಮಾತನಾಡಲೇಬೇಕು ಎಂದೇನು ಇರಲಿಲ್ಲ. ಒಬ್ಬರೊಬ್ಬರನ್ನು ನೋಡುತ್ತ ಕುಳಿತುಬಿಡುತ್ತಿದ್ದರು. ರೇವತಿಯ ಸಾಮಿಪ್ಯ ಮಾತ್ರದಿಂದ ಆತನಿಗೆ ಪರಮ ಸುಖ ಪ್ರಾಪ್ತಿಯಾಗುತ್ತಿತ್ತು. ಆಕೆಯ ಮದುವೆ ಆಗಿ ಮೂರು ವರ್ಷಗಳಾದರೂ, ಆಕೆಯ ಮೇಲಿನ ಆಕರ್ಷಣೆ ಕಿಂಚಿತ್ತೂ ಕಡಿಮೆ ಆಗಿರಲಿಲ್ಲ. ರೇವತಿಯೂ ನಿಶಿಕಾಂತನ ಬಗ್ಗೆ ತಿರಸ್ಕಾರ ತೋರಿಸಿದವಳಲ್ಲ. ತನ್ನನ್ನು ಬಿಟ್ಟು ಅನ್ಯ ವಿಷಯಗಳಲ್ಲಿ ಆಕೆಗೆ ರಸವಿಲ್ಲ ಎಂದು ಆತನಿಗೆ ಖಾತ್ರಿ ಇತ್ತು. ಒಮ್ಮೆ ನಿಶಿಕಾಂತ ಬೇರೆ ಊರಿಗೆ ಹೋಗುವ ಸಿದ್ಧತೆಯಲ್ಲಿದ್ದ. ಸಂಜೆ ಬಸ್ಸಿಗೆ ಹೋಗುವವನಿದ್ದ. ಅಷ್ಟರಲ್ಲಿ ಹೊರಗೆ ಯಾರೋ ವೇಗವಾಗಿ ಬಂದು ಬಾಗಿಲು ಬಡಿದ ಸಪ್ಪಳ ಕೇಳಿಸಿತು. ಬಾಗಿಲು ತೆಗೆದಾಗ ಹೊರಗೆ ಬಂಡಿಯೊಂದು ನಿಂತಿತ್ತು. ಕುತೂಹಲದಿಂದ ಬಂದವನ ಕಡೆಗೆ ನೋಡಿದ.

"ಆಕ್ಸಿಡೆಂಟ್ ಆಗಿದೆ. ತಕ್ಷಣ ಆಸ್ಪತ್ರೆಗೆ ಬರಬೇಕೆಂದು ಹೇಳಿ ಕಳಿಸಿದ್ದಾರೆ." ನಿಶಿಕಾಂತನ ಹೃದಯದ ಮಿಡಿತ ಶೀಘ್ರಗತಿಯಿಂದ ಓಡಲಾರಂಭಿಸಿತು. ಕಾಲುಗಳು ಥರ ಥರ ಕಂಪಿಸಲಾರಂಭಿಸಿದವು. ದಿಗ್ಭ್ರಮೆಗೊಂಡು ಆತ, ''ಯಾರಿಗೆ ? ಏನಾಗಿದೆ ?" ಎಂದು ಕೇಳಿದ. "ಮಗುವಿನ ಮೇಲೆ ಕಾರು ಹರಿದು ಹೋಗಿದೆ." ಇಷ್ಟು ಹೇಳಿ, ಬಂದವ ಹೊರಟು ಹೋದ. ಆತನಿಗೆ ಆಶ್ಚರ್ಯದ ಜತೆ ಆನಂದವಾಗಿ ನಿಟ್ಟುಸಿರುಬಿಟ್ಟ. ರೇವತಿ ಅವನ ಮನವನ್ನು ಸಂಪೂರ್ಣ ಆವರಿಸಿದ್ದಳು. ರೇವತಿಗೆ ಆಘಾತವಾಗಿದೆ ಎಂದೇ ಆತ ಕಳವಳಗೊಂಡಿದ್ದ. ಅರಿವೆ ಹಾಕಿಕೊಂಡು ಆಸ್ಪತ್ರೆಗೆ ಹೋದ. ಆತನಿಗೆ ಹೋಗಲೇಬೇಕಾಗಿತ್ತು. ಆತನಿಗೆ ಮುಖ ಗಂಭೀರವಾಗಿ ಇಟ್ಟುಕೊಳ್ಳಬೇಕಾಗಿತ್ತು. ಆತನೇನು ವ್ಯಾಕುಲಗೊಂಡಿರಲಿಲ್ಲ. ಹಾಗೆ ಆಗಲು ಕಾರಣವೂ ಇರಲಿಲ್ಲ. ಏಕೆಂದರೆ ಗಣಪುಲೆಯ ಮಗನಿಗೆ ಅಪಘಾತವಾಗಿತ್ತು. ಮಗುವಿಗೂ, ನಿಶಿಕಾಂತನಿಗೂ ಯಾವುದೇ ಸಂಬಂಧವಿರಲಿಲ್ಲ. ಈ ಜಗತ್ತಿನಲ್ಲಿ ಸಾವಿರಾರು ಅಪಘಾತಗಳು ಸಂಭವಿಸಿ ನೂರಾರು ಜನರು ಅಕಾಲ ಮರಣಕ್ಕೆ ಈಡಾಗುತ್ತಾರೆ. ಇವರ ಬಗ್ಗೆ ನಮಗೆ ನೋವಾಗಲೀ, ದುಃಖವಾಗಲೀ ಆಗುವುದಿಲ್ಲ. ಯಾಕೆಂದರೆ ಈ ಜನ ನಮಗೆ ಅಪರಿಚಿತರಿರುತ್ತಾರೆ. ನಮ್ಮ ಹತ್ತಿರದವರಾಗಿರುವುದಿಲ್ಲ. ಅದೇ ರೀತಿ, ರೇವತಿಯ ಮಗನ ಅಪಘಾತ ನಿಶಿಕಾಂತನ ಮೇಲೆ ಯಾವದೇ ಪರಿಣಾಮ ಬೀರಿರಲಿಲ್ಲ.

ಆದರೂ ಮಗುವಿನ ಚಿತ್ರ ಅವನ ಎದುರಿಗೆ ಬಂದು ಸುತ್ತಾಡುತ್ತಿತ್ತು. ರೇವತಿ ಎದುರು ಬಂದು ನಿಂತಂತೆ ಆಯಿತು. ಆಕೆ ಭಯಾನಕ ಸಂಕಟದೊಳಗೆ ಬಿದ್ದು ತೊಳಲಾಡುತ್ತಿರಬಹುದು ಎಂದು ಅನಿಸಿತು. ಎರಡು ಶರೀರಗಳ ಸಮ್ಮಿಲನದಿಂದ ಈ ಮಗುವಿನ ಜನನವೇನೋ ಆಗಿತ್ತು. ಒಂದು ರೀತಿ ಅನಾಥವಾಗಿದ್ದ ಈ ಶಿಶುವಿನ ಮೇಲೆ ರೇವತಿಗೂ ಕಕ್ಕುಲಾತಿ ಇಲ್ಲವೆಂದು ನಿಶಿಕಾಂತ ತಿಳಿದುಕೊಂಡಿದ್ದ. ಈ ಮಗು ರೇವತಿಯ ರಕ್ತ ಮಾಂಸದ ಒಂದು ಭಾಗ ಎಂದು ಅವನ ಗ್ರಹಿಕೆ ಆಗಿತ್ತು. ಇನ್ನು ತನಗೋ ಈ ಮಗುವಿನೊಂದಿಗೆ ಯಾವುದೇ ಸಂಬಂಧವಿರಲಿಲ್ಲ. ನಿಶಿಕಾಂತ ಆಸ್ಪತ್ರೆಯೊಳಗೆ ಕಾಲು ಇಟ್ಟಾಗ ಎಲ್ಲ ಕಡೆಗೆ ಶಾಂತತೆ ಪಸರಿಸಿತ್ತು. ವಿಚಾರಣೆ ಮಾಡಿದಾಗ ಮಗುವಿನ ಪ್ರಾಣ ಹೋಗಿ ಸಾಕಷ್ಟು ವೇಳೆ ಆಗಿತ್ತು. ರೇವತಿ ಮನೆಗೆ ಹೋಗಿದ್ದಳು. ನಿಶಿಕಾಂತ ನೇರವಾಗಿ ರೇವತಿ ಮನೆಗೆ ಹೋದ. ಎಂದಿನಂತೆ ಶಾಂತಚಿತ್ತದವನಾಗಿದ್ದ. ದುರ್ಘಟನೆಯಿಂದ